# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1267 |
| ಸದಸ್ಯರ ಹೆಸರು | : | ಶ್ರೀ ಎನ್. ನಾಗರಾಜು (ಎಂ.ಟಿ.ಬಿ)<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ | : | 19.03.2025 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಬಗರ್‌ಹುಕುಂ ಸಾಗುವಳಿ ಸಮಿತಿಗಳಲ್ಲಿ ನಿರ್ಣಯಿಸಿ ಅರ್ಹ ಫಲಾನುಭವಿಗಳಿಗೆ ಜಮೀನು ಮಂಜೂರು ಮಾಡಲಾಗಿದ್ದರೂ ಸಹ ಈವರೆಗೂ ಖಾತೆ ಮಾಡದಿರುವ ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಬಗರ್‌ಹುಕುಂ ಸಾಗುವಳಿ ಸಮಿತಿಗಳಲ್ಲಿ ನಿರ್ಣಯಿಸಿ ಅರ್ಹ ಫಲಾನುಭವಿಗಳಿಗೆ ಜಮೀನು ಮಂಜೂರು ಮಾಡಲಾಗಿದ್ದರೂ ಸಹ ಈವರೆಗೂ ಖಾತೆ ಮಾಡದಿರುವ ಜಿಲ್ಲಾವಾರು ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿವೆ: |

| ಕ್ರ. ಸಂ. | ಜಿಲ್ಲೆಯ ಹೆಸರು | ಖಾತೆ ಮಾಡದಿರುವ ಪ್ರಕರಣಗಳ ಸಂಖ್ಯೆ |
|---|---|---|
| 1 | ಬೆಂಗಳೂರು ನಗರ ಜಿಲ್ಲೆ | 0 |
| 2 | ಬೆಂಗಳೂರು ಗ್ರಾಮಾಂತರ ಜಿಲ್ಲೆ | 228 |
| 3 | ರಾಮನಗರ ಜಿಲ್ಲೆ | 3608 |
| 4 | ಚಿಕ್ಕಬಳ್ಳಾಪುರ ಜಿಲ್ಲೆ | 1527 |
| 5 | ಕೋಲಾರ ಜಿಲ್ಲೆ | 171 |
| 6 | ತುಮಕೂರು ಜಿಲ್ಲೆ | 4273 |
| 7 | ಚಿತ್ರದುರ್ಗ ಜಿಲ್ಲೆ | 284 |
| 8 | ದಾವಣಗೆರೆ ಜಿಲ್ಲೆ | 0 |
| 9 | ಶಿವಮೊಗ್ಗ ಜಿಲ್ಲೆ | 0 |
| 10 | ಮೈಸೂರು ಜಿಲ್ಲೆ | 400 |
| 11 | ಮಂಡ್ಯ ಜಿಲ್ಲೆ | 1084 |
| 12 | ಚಾಮರಾಜನಗರ ಜಿಲ್ಲೆ | 0 |
| 13 | ಹಾಸನ ಜಿಲ್ಲೆ | 2679 |
| 14 | ಚಿಕ್ಕಮಗಳೂರು ಜಿಲ್ಲೆ | 596 |
| 15 | ಕೊಡಗು ಜಿಲ್ಲೆ | 33 |
| 16 | ದಕ್ಷಿಣ ಕನ್ನಡ ಜಿಲ್ಲೆ | 109 |
| 17 | ಉಡುಪಿ ಜಿಲ್ಲೆ | 0 |
| 18 | ಬೆಳಗಾವಿ ಜಿಲ್ಲೆ | 0 |
| 19 | ಬಾಗಲಕೋಟೆ ಜಿಲ್ಲೆ | 0 |
| 20 | ವಿಜಯಪುರ ಜಿಲ್ಲೆ | 0 |
| 21 | ಧಾರವಾಡ ಜಿಲ್ಲೆ | 0 |
| 22 | ಗದಗ ಜಿಲ್ಲೆ | 0 |
| 23 | ಹಾವೇರಿ ಜಿಲ್ಲೆ | 0 |
| 24 | ಉತ್ತರ ಕನ್ನಡ ಜಿಲ್ಲೆ | 83 |
| 25 | ಕಲಬುರಗಿ ಜಿಲ್ಲೆ | 350 |
| 26 | ಬಳ್ಳಾರಿ ಜಿಲ್ಲೆ | 11 |
| 27 | ಬೀದರ್ ಜಿಲ್ಲೆ | 0 |
| 28 | ಕೊಪ್ಪಳ ಜಿಲ್ಲೆ | 710 |

| | |
|---|---|---|
| 29 | ರಾಯಚೂರು ಜಿಲ್ಲೆ | 0 |
| 30 | ಯಾದಗಿರಿ ಜಿಲ್ಲೆ | 22 |
| 31 | ವಿಜಯನಗರ ಜಿಲ್ಲೆ | 47 |
| | ಒಟ್ಟು | **16215** |

| | | |
|---|---|---|
| (ಆ) | ಸಾಗುವಳಿ ಚೀಟಿ ನೀಡಿ ವರ್ಷಗಳು ಕಳೆದಿದ್ದರೂ ಸಹ ಈವರೆವಿಗೂ ಯಾವ ಯಾವ ಕಾರಣಗಳಿಗಾಗಿ ಖಾತೆ ಮಾಡದೆ ವಿಲೇ ಇಡಲಾಗಿದೆ; | ಸಾಗುವಳಿ ಚೀಟಿ ನೀಡಿದ್ದರೂ ಖಾತೆ ಮಾಡದೆ ಬಾಕಿ ಉಳಿದಿರುವುದಕ್ಕೆ ಕಾರಣಗಳು ಕೆಳಕಂಡಂತಿವೆ:<br><br>1. ಅರಣ್ಯ ಇಲಾಖೆ ಮತ್ತು ಹೇಮಾವತಿ ಜಲಾಶಯ ಯೋಜನೆ ಹಾಗೂ ಮಾಜಿ ಸೈನಿಕರಿಗೆ ಕಾಯ್ದಿರಿಸಿರುವ ಜಮೀನುಗಳಾಗಿರುತ್ತವೆ;<br>2. ಕೆಲವು ಪ್ರಕರಣಗಳಲ್ಲಿ ಮಂಜೂರಿದಾರರು ಸ್ವಾಧೀನದಲ್ಲಿ ಇರುವುದಿಲ್ಲ.<br>3. ಅರಣ್ಯ ಇಲಾಖೆ ಗಡಿ ನಿಗದಿಪಡಿಸದೇ ಇರುವುದರಿಂದ ಪಹಣಿ ಕಾಲಂ 9 ರಲ್ಲಿ ನೆಡುತೋಪು ಮತ್ತು ಅರಣ್ಯ ಇಲಾಖೆ ಎಂದು ನಮೂದಾಗಿರುತ್ತದೆ.<br>4. ಅಮೃತಮಹಲ್ ಕಾವಲು ಪ್ರದೇಶ ಮತ್ತು ಅರಣ್ಯ ಪ್ರದೇಶವು ನಿರ್ಬಂಧಿತ ಜಮೀನಾಗಿರುವುದರಿಂದ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುತ್ತದೆ.<br>5. ಅರಣ್ಯ ಇಲಾಖೆಗೆ ಮರ ಮಾಲ್ಕಿ ಪಾವತಿಸಿರುವುದಿಲ್ಲ.<br>6. ಸರ್ಕಾರಿ ಜಮೀನುಗಳು ಭಾಗಶ: ಅರಣ್ಯ/ಗೋಮಾಳ/ ಸೊಪ್ಪಿನಬೆಟ್ಟ, ಹುಲ್ಲುಬನ್ನಿ ಇತ್ಯಾದಿ ವರ್ಗಕ್ಕೆ ಸೇರಿದ್ದು, ಕೆಲವು ಜಮೀನುಗಳು ಡೀಮ್ಡ್ ಫಾರೆಸ್ಟ್‌ಗೆ ವರ್ಗಾವಣೆಯಾಗಿದ್ದು, ಈ ಜಮೀನುಗಳ ಗಡಿ ಗುರುತಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ ಹಾಗೂ ಕೆಲವು ಪ್ರಕರಣಗಳಲ್ಲಿ ಅರಣ್ಯ ಇಲಾಖೆಯ ಅಭಿಪ್ರಾಯ ಪಡೆಯದೆ ಸಾಗುವಳಿ ಚೀಟಿ ನೀಡಲಾಗಿರುತ್ತದೆ.<br>7. ಕೆಲವು ಮಂಜೂರಾತಿ ಪ್ರಕರಣಗಳಲ್ಲಿ ಮೂಲ ಮಂಜೂರಾತಿ ಕಡತ ಲಭ್ಯವಿಲ್ಲದೇ ಇರುವುದು.<br>8. ಮೂಲ ಮಂಜೂರಾತಿ ದಾಖಲೆಗಳಾದ ಮಂಜೂರು ನಡವಳಿ, ಸಾಗುವಳಿ ಚೀಟಿ ವಿತರಣಾ ವಹಿ, ಕಿಮ್ಮತ್ತು ಪಾವತಿಸಿರುವ ವಹಿ ಇತ್ಯಾದಿಗಳಲ್ಲಿ ಮೂಲ ಮಂಜೂರಿದಾರರ ಹೆಸರು ನಮೂದಾಗದೇ ಇರುವುದು & ಕೆಲವೊಂದು ಪ್ರಕರಣಗಳಲ್ಲಿ ತಿದ್ದಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.<br>9. ಮೂಲ ಮಂಜೂರಿದಾರರು ಕೆಲವು ಪ್ರಕರಣಗಳಲ್ಲಿ ಮೃತರಾಗಿದ್ದು, ಸದರಿಯವರ ವಾರಸುದಾರರು ವಂಶವೃಕ್ಷ, ಒಪ್ಪಿಗೆ ಪ್ರಮಾಣ ಪತ್ರ ಇತ್ಯಾದಿ ದಾಖಲೆಗಳಲ್ಲಿ ಒದಗಿಸದೇ ಇರುವುದು.<br>10. ಸಾಗುವಳಿ ಚೀಟಿಗಳು ಕೆಲವೊಂದು ಖೋಟ್ಟಿ ದಾಖಲೆಗಳಿಂದ ಕೂಡಿದ್ದು, ಸದರಿ ಮಂಜೂರಾತಿಯ ನೈಜತೆಯನ್ನು ಪರಿಶೀಲಿಸುವ ಹಂತದಲ್ಲಿ ಬಾಕಿ ಇರುತ್ತವೆ.<br>11. ಕೆಲವು ಮಂಜೂರಾದ ಪ್ರಕರಣಗಳು ನೈಜತೆಯಿಂದ ಕೂಡಿದ್ದು, ಪ್ರಸ್ತಾಪಿತ ಮಂಜೂರಿಯಾದ ಪ್ರದೇಶದಲ್ಲಿ ಈಗಾಗಲೇ ಅಧಿಸೂಚಿತ ಡೀಮ್ಡ್ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಬರುವುದರಿಂದ ಅರಣ್ಯ ಇಲಾಖೆಯವರು ನಿರಾಕ್ಷೇಪಣಾ ಪತ್ರವನ್ನು ನೀಡುವ ಹಂತದಲ್ಲಿ ಬಾಕಿ ಇರುತ್ತವೆ. |

| | | |
|---|---|---|
| | | 12. ಮಂಜೂರಿಯಾದ ಮೂಲ ಸರ್ವೆ ನಂಬರಿನ ಪಹಣಿಯ ಅಂಕಣ 09 ರಲ್ಲಿ ಶೂನ್ಯ ವಿಸ್ತೀರ್ಣ ನಮೂದಾಗಿದ್ದು, ಆಕಾರ್ ಬಂದ್ ನಂತೆ ವಿಸ್ತೀರ್ಣವನ್ನು ಪಹಣಿಯಲ್ಲಿ ಸರಿಪಡಿಸುವ ಹಂತದಲ್ಲಿ ಇರುವುದರಿಂದ ವಿಳಂಬವಾಗಿರುತ್ತದೆ.<br>13. ಕೆಲವು ಮಂಜೂರಾದ ಪ್ರಕರಣಗಳಲ್ಲಿ ಕರ್ನಾಟಕ ಭೂ ಕಂದಾಯ ಅಧಿನಿಯಮಗಳು 1966 ರ ನಿಯಮ 108(ಎಫ್) ರಿಂದ 108(ಎನ್) ರವರೆಗೆ ನಿಯಮಗಳನ್ನು ಪರಿಶೀಲಿಸದೇ ಸಾಗುವಳಿ ಚೀಟಿ ನೀಡಿರುವುದು.<br>14. ಕೆಲವು ಮಂಜೂರಾತಿ ಪ್ರಕರಣಗಳಲ್ಲಿ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 94 ಎ(4) ರಡಿಯಲ್ಲಿ ನಿರ್ಬಂಧಿಸಿದ ಅಂತರದ ಒಳಗಡೆ ಮಂಜೂರಾತಿ ನೀಡಿರುವುದು.<br>15. ಕೆಲವು ಮಂಜೂರಾತಿ ಪ್ರಕರಣಗಳು ಸಮಿತಿಯ ಮುಂದೆ ಸ್ಥಿರೀಕರಣಕ್ಕಾಗಿ ಬಾಕಿ ಇರುತ್ತದೆ.<br>16. ಕೆಲವು ಪ್ರಕರಣಗಳಲ್ಲಿ ಜಮೀನಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿ ವಿವಾದಗಳಿರುತ್ತವೆ.<br>17. ಕೆಲವು ಪ್ರಕರಣಗಳಲ್ಲಿ ಮಂಜೂರಾತಿಯ ನೈಜತೆಯನ್ನು ಪರಿಶೀಲಿಸಬೇಕಾಗಿರುತ್ತದೆ.<br>18. ಕೆಲವು ಪ್ರಕರಣಗಳಲಿ ಆರ್.ಟಿ.ಸಿ. ಕಾಲಂ 3 & 9 ತಾಳೆ ಇಲ್ಲದಿರುವುದು.<br>19. ಕೆಲವು ಪ್ರಕರಣಗಳಲ್ಲಿ ಗ್ರಾಮಸ್ಥರು ಹಾಗೂ ವಿವಿಧ ಸಂಘಗಳ ತಕರಾರು ಇರುತ್ತವೆ.<br>20. ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಯ ಜಂಟಿ ಅಳತೆ ಕಾರ್ಯ ಬಾಕಿ ಇರುವುದು. |
| (ಇ) | ಈ ರೀತಿ ವಿಳಂಬದಿಂದ ಕಂಗಾಲಾಗಿರುವ ಸಾಗುವಳಿದಾರರು ಅರ್ಹ ಫಲಾನುಭವಿಗಳಾಗಿದ್ದರೂ ಖಾತೆಯಾಗದೆ ಮತ್ತು ಪಹಣಿಯಲ್ಲಿ ನಮೂದು ಆಗದೆ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 94-ಎ, 94-ಬಿ, 94-ಎ(4) ರಡಿ ಕಲ್ಪಿಸಿರುವ ಅವಕಾಶದಂತೆ ನಮೂನೆ-50, 53 ಮತ್ತು 57ರಡಿ ಸ್ವೀಕೃತವಾಗಿರುವ ಅರ್ಜಿಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸುವ ಕುರಿತಂತೆ ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 45 ಎಲ್‌ಜಿಪಿ 2023, ದಿನಾಂಕ: 01.12.2023ರಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.<br><br>ಸುತ್ತೋಲೆಯ ಪ್ರತಿಯನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ. |
| (ಈ) | ಬಂದಿದ್ದಲ್ಲಿ, ಈ ರೀತಿಯ ಸಮಸ್ಯೆಯನ್ನು ನಿವಾರಿಸಲು ಸರ್ಕಾರವು ಯಾವ ಕ್ರಮ ಕೈಗೊಳ್ಳುವುದು ? | |

**ಸಂ:ಕಂಇ 88 ಟಿಆರ್‌ಎಂ 2025 (1713511)**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

# ಕರ್ನಾಟಕ ಸರ್ಕಾರ

ಸಂಖ್ಯೆ: ಆರ್‌ಡಿ 45 ಎಲ್‌ಜಿಪಿ 2023

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 01.12.2023

## ಸುತ್ತೋಲೆ

ವಿಷಯ: ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 94-ಎ, 94-ಬಿ, 94-ಎ(4)ರಡಿ ಕಲ್ಪಿಸಿರುವ ಅವಕಾಶದಂತೆ ನಮೂನೆ-50, 53 ಮತ್ತು 57ರಡಿ ಸ್ವೀಕೃತವಾಗಿರುವ ಅರ್ಜಿಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸುವ ಕುರಿತು ಮಾರ್ಗಸೂಚಿಗಳು.

* * *

ನೂತನ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ನಡೆದ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 94-ಎ, 94-ಬಿ ಮತ್ತು 94-ಎ(4)ರ ಅಡಿಯಲ್ಲಿ ಕಲ್ಪಿಸಿರುವ ಅವಕಾಶದಂತೆ ನಮೂನೆ-50, 53 ಮತ್ತು 57ರಡಿ ಸ್ವೀಕರಿಸಿರುವ ಅರ್ಜಿಗಳ ಪೈಕಿ ಸಾಕಷ್ಟು ಅರ್ಜಿಗಳು ವಿಲೇವಾರಿಯಾಗದೇ ಗಮನಾರ್ಹ ಪ್ರಮಾಣದಲ್ಲಿ ತಾಲ್ಲೂಕು ಹಂತದಲ್ಲಿ ಬಗರ್ ಹುಕುಂ ಸಮಿತಿಗಳ ಮುಂದೆ ಬಾಕಿ ಇರುವುದು ಹಾಗೂ ಇವುಗಳ ಪೈಕಿ ಮಂಜೂರಾತಿಗೆ ಅರ್ಹವಿಲ್ಲದ ಅರ್ಜಿಗಳು ಬಾಕಿ ಇರಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇದಲ್ಲದೇ, ಸರ್ಕಾರಿ ಜಮೀನು ಒತ್ತುವರಿ ತೆರವಿಗೆ ಸಂಬಂಧಿಸಿದ ಹಲವಾರು ಪ್ರಕರಣಗಳಲ್ಲಿ ನಮೂನೆ-50, 53 ಮತ್ತು 57ರ ಸಾಕಷ್ಟು ಅರ್ಜಿಗಳು ಇತ್ಯರ್ಥವಾಗದೇ ಬಾಕಿ ಇರುವುದರಿಂದ ಒತ್ತುವರಿಯನ್ನು ಪರಿಣಾಮಕಾರಿಯಾಗಿ ತೆರವುಗೊಳಿಸಲು ಸಾಧ್ಯವಾಗಿರುವುದಿಲ್ಲ. ಮಾನ್ಯ ನ್ಯಾಯಾಲಯವು ಸಹ ಬಗರ್ ಹುಕುಂ ಸಮಿತಿಗಳು ಅರ್ಜಿಗಳನ್ನು ಇತ್ಯರ್ಥಮಾಡದೇ ಬಾಕಿ ಇರುವುದನ್ನು ಗಂಭೀರವಾಗಿ ಪರಿಗಣಿಸಿರುತ್ತದೆ.

ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 94-ಎ ಮತ್ತು ಕರ್ನಾಟಕ ಭೂ ಕಂದಾಯ ನಿಯಗಳು, 1966ರ ನಿಯಮ-108(ಇ)ರಡಿ ಆಯಾ ವಿಧಾನಸಭಾ ಕ್ಷೇತ್ರವಾರು ಬಗರ್‌ಹುಕುಂ ಸಾಗುವಳಿ ಸಮಿತಿ ರಚಿಸಲು ಅವಕಾಶವಿದ್ದು, ಅಂತಹ ಸಮಿತಿಗೆ ಸಂಬಂಧಪಟ್ಟ ವಿಧಾನಸಭಾ ಸದಸ್ಯರು ಅಧ್ಯಕ್ಷರಾಗಿದ್ದು, ಮೂವರು ಅಧಿಕಾರೇತರ ನಾಮನಿರ್ದೇಶಿತ ಸದಸ್ಯರುಗಳನ್ನು ಒಳಗೊಂಡಿದ್ದು, ಸಂಬಂಧಪಟ್ಟ ತಹಶೀಲ್ದಾರರು ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ ಮತ್ತು ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108-ಇಇ ರನ್ವಯ ಹೆಚ್ಚುವರಿ ಸಮಿತಿಗಳನ್ನು ರಚಿಸಲು ಅವಕಾಶವಿರುತ್ತದೆ

ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108-ಇ (2 ಮತ್ತು 3)ರ ಪ್ರಕಾರ "ಅಧ್ಯಕ್ಷ ಮತ್ತು ಅವನ ಅನುಪಸ್ಥಿತಿಯಲ್ಲಿ ತಹಶೀಲ್ದಾರನು ಸಭೆಯನ್ನು ಸಂಯೋಜಿಸತಕ್ಕದ್ದು ಮತ್ತು ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಸಮಿತಿ ಕೋರಂ ಎರಡು ಆಗಿರತಕ್ಕದ್ದು ಅದರಲ್ಲಿ ಒಬ್ಬರು ತಹಶೀಲ್ದಾರರಾಗಿರತಕ್ಕದ್ದು ಎಂದು ತಿಳಿಸಲಾಗಿದೆ.

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 94-ಎ, 94-ಬಿ ಮತ್ತು 94-ಎ(4)ರ ಅಡಿಯಲ್ಲಿ ನಮೂನೆ-50, 53 ಮತ್ತು 57ರಡಿ ಸ್ವೀಕರಿಸಿರುವ ಅರ್ಜಿಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಈ ಕೆಳಕಂಡ ಕ್ರಮಗಳನ್ನು ಅನುಸರಿಸುವುದು:-

1. ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94-ಎ ರಡಿ ನಮೂನೆ-50ರಡಿ ಸ್ವೀಕರಿಸಿದ ಅರ್ಜಿಗಳನ್ನು ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108-ಸಿ(2)ರನ್ವಯ ನಮೂನೆ-51ರಲ್ಲಿ ಅರ್ಜಿಯ ವಿವರಗಳನ್ನು ನಮೂದಿಸತಕ್ಕದ್ದು;

2. ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94-ಬಿ ರಡಿ ನಮೂನೆ-53ರಡಿ ಸ್ವೀಕರಿಸಿದ ಅರ್ಜಿಗಳನ್ನು ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108-ಸಿಸಿ(2)ರನ್ವಯ ನಮೂನೆ-56ರಲ್ಲಿ ಅರ್ಜಿಯ ವಿವರಗಳನ್ನು ನಮೂದಿಸತಕ್ಕದ್ದು;

3. ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94-ಎ(4) ರಡಿ ನಮೂನೆ-57ರಡಿ ಸ್ವೀಕರಿಸಿದ ಅರ್ಜಿಗಳನ್ನು ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108-ಸಿಸಿಸಿ(2)ರನ್ವಯ ನಮೂನೆ-58ರಲ್ಲಿ ಅರ್ಜಿಯ ವಿವರಗಳನ್ನು ನಮೂದಿಸತಕ್ಕದ್ದು;

4. ಗ್ರಾಮದ ಒಂದು ಸರ್ವೆ ನಂಬರ್‌ನಲ್ಲಿ ಬಾಕಿ ಇರುವ ನಮೂನೆ-50, 53 ಮತ್ತು 57ರ ಅರ್ಜಿಗಳನ್ನು ವಿಲೇವಾರಿ ಮಾಡುವಾಗ ಕ್ರಮವಾಗಿ ಮೊದಲು ನಮೂನೆ-50 ರಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ನಂತರ ನಮೂನೆ-53ರಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ಹಾಗೂ ತದ ನಂತರದಲ್ಲಿ ನಮೂನೆ-57ರಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ಹಿರಿತನದ ಆಧಾರದ ಮೇಲೆ ವಿಲೇವಾರಿ ಮಾಡತಕ್ಕದ್ದು. ಬಾಕಿ ಇರುವ ನಮೂನೆ-50 ಹಾಗೂ ನಮೂನೆ-53ರ ಅರ್ಜಿಗಳನ್ನು ಕಡ್ಡಾಯವಾಗಿ ತಂತ್ರಾಂಶದಲ್ಲಿ ಇಂಡೀಕರಿಸಿದ ನಂತರ ಅರ್ಜಿಗಳನ್ನು ಇತ್ಯರ್ಥಪಡಿಸಲು ತಹಶೀಲ್ದಾರರು ಬಗರ್ ಹುಕುಂ ತಂತ್ರಾಂಶದಲ್ಲಿಯೇ ಮುಂದಿನ ಕ್ರಮವಹಿಸತಕ್ಕದ್ದು.

5. ತಹಶೀಲ್ದಾರರು ಅರ್ಜಿಗಳನ್ನು ಪರಿಶೀಲಿಸಿದ ನಂತರ ಅನರ್ಹ ಅರ್ಜಿಗಳನ್ನು ಜಿಲ್ಲಾಧಿಕಾರಿಗಳಿಗೆ ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108ಸಿ, ನಿಯಮ 108ಸಿಸಿ ಹಾಗೂ ನಿಯಮ 108ಸಿಸಿಸಿ ರಡಿ ವಿಲೇಗೊಳಿಸಲು ಸಲ್ಲಿಸತಕ್ಕದ್ದು ಹಾಗೂ ಅರ್ಹ ಅರ್ಜಿಗಳನ್ನು ಸಮಿತಿಯ ಮುಂದೆ ಮಂಡಿಸಲು ಕ್ರಮವಹಿಸತಕ್ಕದ್ದು.

6. ಸಮಿತಿಯ ಕಾರ್ಯದರ್ಶಿಯಾಗಿರುವ ತಹಶೀಲ್ದಾರರು ದಾಖಲೆಗಳನ್ನು ಸ್ವೀಕರಿಸಿದ ನಂತರ ಅರ್ಜಿಗಳನ್ನು ಪರಿಶೀಲಿಸಿ ನಿಗದಿಪಡಿಸಿದ ಚೆಕ್ ಲಿಸ್ಟ್‌ನಲ್ಲಿ ವಿವರಗಳನ್ನು ಕಡ್ಡಾಯವಾಗಿ ಭರ್ತಿಮಾಡಿ ಅರ್ಹ ಅರ್ಜಿಗಳನ್ನು ಸಮಿತಿಯ ಮುಂದೆ ಮಂಡಿಸತಕ್ಕದ್ದು ಹಾಗೂ ಅನರ್ಹ ಅರ್ಜಿಗಳನ್ನು ಪರಿಶೀಲಿಸಿ ನಿಗದಿಪಡಿಸಿದ ಚೆಕ್ ಲಿಸ್ಟ್‌ನಲ್ಲಿ ವಿವರಗಳನ್ನು ಕಡ್ಡಾಯವಾಗಿ ಭರ್ತಿಮಾಡಿ ಜಿಲ್ಲಾಧಿಕಾರಿಗಳಿಗೆ ವರ್ಗಾಯಿಸತಕ್ಕದ್ದು;

7. ನಮೂನೆ-50, 53 ಮತ್ತು 57ರಲ್ಲಿ ಸ್ವೀಕರಿಸಿದ ಅರ್ಹ ಅರ್ಜಿಗಳನ್ನು ತಹಶೀಲ್ದಾರರು ಹಿರಿತನ ಕ್ರಮದಲ್ಲಿ ದಾಖಲಿಸತಕ್ಕದ್ದು ಮತ್ತು ಸಂಬಂಧಿತ ಎಲ್ಲಾ ದಾಖಲೆಗಳನ್ನು ಮತ್ತಷ್ಟು ಪರಿಶೀಲನೆಗಾಗಿ ಅವರಿಂದ ಅಧಿಕೃತವಾಗಿ ಅಧಿಕಾರ ಪಡೆದ ಅಧಿಕಾರಿಗೆ ಕಳುಹಿಸತಕ್ಕದ್ದು. ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರು ಬಗರ್ ಹುಕುಂ ಅರ್ಹ ಅರ್ಜಿಗಳ ಕಡತ

ತಯಾರಿಸುವುದಕ್ಕಾಗಿಯೇ ಪ್ರತ್ಯೇಕವಾಗಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಇಬ್ಬರು ಸರ್ಕಾರಿ ಮೋಜಣಿದಾರರನ್ನು ಕಡ್ಡಾಯವಾಗಿ ನಿಯೋಜಿಸತಕ್ಕದ್ದು. ಕಂದಾಯ ಮತ್ತು ಸರ್ವೆ ಇಲಾಖೆ ಅಧಿಕಾರಿಗಳು ಈ ಕೆಳಕಂಡಂತೆ ಕ್ರಮವಹಿಸತಕ್ಕದ್ದು.

- ಸ್ಥಳ ತನಿಖೆ ಮಾಡುವಾಗ ಅನಧಿಕೃತ ಸಾಗುವಳಿದಾರರ ಆಧಾರ್ e-KYC ಕಡ್ಡಾಯವಾಗಿ ಮಾಡತಕ್ಕದ್ದು.
- ಸ್ಥಳ ತನಿಖೆ ನಡೆಸುವಾಗ ಅನಧಿಕೃತ ಸಾಗುವಳಿ ಜಮೀನಿನ ವಿಸ್ತೀರ್ಣ ಮತ್ತು ಗಡಿಯನ್ನು ಬಗರ್ ಹುಕುಂ ಮೊಬೈಲ್ ಆಪ್ (Mobile App) ಮೂಲಕ Geo Fencing ಮಾಡತಕ್ಕದ್ದು.
- ಕಂದಾಯ ಅಧಿಕಾರಿಗಳು ಹಾಗೂ ಸರ್ವೆ ಇಲಾಖೆಯ ಅಧಿಕಾರಿಗಳು ಅನಧಿಕೃತ ಸಾಗುವಳಿದಾರರ ಜಮೀನಿನ Geo fencing ಮಾಡುವಾಗ ರಸ್ತೆ ಸಂಪರ್ಕ (ಬಂಡಿದಾರಿ) ನಕ್ಷೆಯಲ್ಲಿ ಕಡ್ಡಾಯವಾಗಿ ಗುರುತಿಸತಕ್ಕದ್ದು.
- ಮಹಜರ್ ಪ್ರಕ್ರಿಯೆಯನ್ನು ಬಗರ್ ಹುಕುಂ ಮೊಬೈಲ್ ಆಪ್ (Mobile App) ಮೂಲಕವೇ ಚಿತ್ರೀಕರಣ ಮಾಡತಕ್ಕದ್ದು.
- ಸ್ಥಳ ತನಿಖೆಯ ಸಮಯದಲ್ಲಿ ಅರ್ಜಿದಾರರಿಂದ ಪಡಿತರ ಚೀಟಿ, ಅಹವಾಲ್ ತಃಖ್ತೆ, ಆಧಾರ್ ಸಂಖ್ಯೆ ತಹಶೀಲ್ದಾರರಿಂದ ಪಡೆದ ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರಗಳನ್ನು ಪಡೆದು ಮೊಬೈಲ್ ಆಪ್ ನಲ್ಲಿ ನಮೂದಿಸತಕ್ಕದ್ದು.
- ಗ್ರಾಮ ಆಡಳಿತಾಧಿಕಾರಿ ಹಾಗೂ ಕಂದಾಯ ನಿರೀಕ್ಷಕರು ಸ್ಥಳ ಪರಿಶೀಲನಾ ವರದಿ, ನಕ್ಷೆ, ಮಹಜರ್‌ನೊಂದಿಗೆ ವರದಿಯನ್ನು ಸರ್ವೆ ಇಲಾಖೆಗೆ ಹಾಗು ತಹಶೀಲ್ದಾರಿಗೆ ಏಕ ಕಾಲದಲ್ಲಿ ತಂತ್ರಾಂಶದಲ್ಲಿ ಸಲ್ಲಿಸತಕ್ಕದ್ದು.
- ಮುಂದುವರೆದು, ಸರ್ವೆ ಇಲಾಖೆ ಅಧಿಕಾರಿಗಳು ಕಂದಾಯ ಅಧಿಕಾರಿಗಳು ಸಲ್ಲಿಸಿರುವ ನಕ್ಷೆಯನ್ನು ಪರಿಶೀಲಿಸಿಕೊಂಡು ತಂತ್ರಾಂಶದಲ್ಲಿ ಸ್ವೀಕರಿಸಿದ ಮಾಹಿತಿಯನ್ವಯ ದರಖಾಸ್ತು ಪೋಡಿಗಾಗಿ ಕಡತದ ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳತಕ್ಕದ್ದು.

8. ಅರ್ಜಿಗಳನ್ನು ಪರಿಶೀಲಿಸುವಾಗ ಸದಸ್ಯ ಕಾರ್ಯದರ್ಶಿಯಾದ ತಹಶೀಲ್ದಾರರು ಅರ್ಜಿದಾರರಿಂದ ಪಡಿತರ ಚೀಟಿ, ಆಧಾರ್ ಸಂಖ್ಯೆ, ಚುನಾವಣಾ ಗುರುತಿನ ಚೀಟಿ, ತಹಶೀಲ್ದಾರರಿಂದ ಪಡೆದ ಜಾತಿ ಪ್ರಮಾಣ ಪತ್ರ / ಆದಾಯ ಪ್ರಮಾಣ ಪತ್ರ / ವಾಸಸ್ಥಳ ದೃಢೀಕರಣ ಪತ್ರವನ್ನು, ಗ್ರಾಮ ಆಡಳಿತಾಧಿಕಾರಿ / ರಾಜಸ್ವ ನಿರೀಕ್ಷಕರು / ಶಿರಸ್ತೆದಾರರ ವರದಿಗಳನ್ನು ಹಾಗೂ Karnataka State Remote Sensing Applications Centre (KSRSAC) ನಿಂದ ಉಪಗ್ರಹ ಆಧರಿತ ಚಿತ್ರ (Satellite Image) ಪರಿಗಣಿಸಿ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ದಾಖಲಿಸತಕ್ಕದ್ದು.

9. ತಹಶೀಲ್ದಾರರು ಸಮಿತಿಗೆ ತಮ್ಮ ಶಿಫಾರಸ್ಸು ನೀಡುವ ಮುನ್ನ ಈ ಕೆಳಕಂಡ ಅಂಶಗಳಂತೆ ಕ್ರಮವಹಿಸತಕ್ಕದ್ದು.

   a) ಕರ್ನಾಟಕ ಭೂ ಕಂದಾಯ ನಿಯಮ, 1966ರ ನಿಯಮ 108(ಐ)ರನ್ವಯ ಕರ್ನಾಟಕ ಭೂ ಕಂದಾಯ ಅಧಿನಿಯಮ,1964ರ ಕಲಂ 71ರ ಪ್ರಕರಣದ ಮೇರೆಗೆ ವಿಶೇಷ ಉದ್ದೇಶಗಳಿಗಾಗಿ ಒಪ್ಪಿಸಿದ ಭೂಮಿಗಳು ಅಂದರೆ, ಗೋಮಾಳ / ಮೀಸಲು ಕಾಡು, ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿರಿಸಿದ

ಜಮೀನು ಮತ್ತು ದೇವರಕಾಡು, ಉರ್ದುವೆ, ಗುಂಡುತೋಪು ಕೆರೆಯ ತಳಪಾಯ, ಫೋಟ್ ಖರಾಬ್ ಹಳ್ಳ, ಸ್ಮಶಾನಗಳು ಎಂಬುದಾಗಿ ಕಂದಾಯ ದಾಖಲೆಗಳಲ್ಲಿ ವರ್ಣಿಸಲಾದ ಭೂಮಿಗಳು ಮತ್ತು ಸಾರ್ವಜನಿಕ ಉದ್ದೇಶಕ್ಕಾಗಿ ಸರ್ಕಾರದ ಅಭಿಪ್ರಾಯದಲ್ಲಿ ಅಗತ್ಯಪಡಿಸಿದ ಅಂಥ ಭೂಮಿಗಳನ್ನು ಮಂಜೂರಾತಿ ಮಾಡತಕ್ಕದ್ದಲ್ಲ. ನಗರ ಅಥವಾ ಪಟ್ಟಣದ ಪರಿಮಿತಿಯೊಳಗೆ ಸರ್ಕಾರದ ಭೂಮಿಯನ್ನು ಯಾವನೇ ವ್ಯಕ್ತಿ ಅಥವಾ ಖಾಸಗಿ ಸಂಸ್ಥೆಗೆ ಮಂಜೂರಾತಿ ಮಾಡತಕ್ಕದ್ದಲ್ಲ ಅಂಥ ಎಲ್ಲಾ ಭೂಮಿಗಳನ್ನು ಬೆಳೆಯುತ್ತಿರುವ ಅಥವಾ ಪಟ್ಟಣದ ಸಾರ್ವಜನಿಕ ಅವಶ್ಯಕತೆಗಳಿಗಾಗಿ ಒದಗಿಸುವುದಕ್ಕಾಗಿ ಸಾರ್ವಜನಿಕ ಅಥವಾ ಸರ್ಕಾರದ ಉದ್ದೇಶಗಳಿಗಾಗಿ ಕಾಯ್ದಿರಿಸತಕ್ಕದ್ದು ಎಂದು ತಿಳಿಸಲಾಗಿದೆ.

b) ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ. 168 ಎಲ್.ಜಿ.ಪಿ. 2014, ದಿನಾಂಕ: 18.09.2014ರಲ್ಲಿ ತಿಳಿಸಿರುವಂತೆ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94-ಎ(4)ರಡಿಯಲ್ಲಿ ನಿರ್ಬಂಧಿತ ಅಂತರವನ್ನು ತೀರ್ಮಾನಿಸುವಾಗ ಅನುಸರಿಸಬೇಕಾದ ಕ್ರಮವನ್ನು ಕರ್ನಾಟಕ ಜನರಲ್ ಕ್ಲಾಸ್ ಕಾಯ್ದೆ, 1899ರ ಕಲಂ 11 (Measurement of distances) ರಡಿಯಲ್ಲಿ ವಿವರಿಸಿರುವಂತೆ ಕ್ರಮ ಕೈಗೊಳ್ಳುವುದು. ಅದರ ಉದ್ಧೃತ ಭಾಗ ಈ ಕೆಳಕಂಡಂತೆ ಇದೆ.

> "11: Measurement of distance:- In the measurement of any distance, for the purposes of (any Mysore Act or Karnataka Act) made after the commencement of this Act, that distance shall, unless a different intention appears, be measured in a straight line on a horizontal plane".

c) ತಹಶೀಲ್ದಾರರು ಅರ್ಜಿಗಳನ್ನು ಪರಿಶೀಲಿಸುವಾಗ ನಿರ್ಬಂದಿತ ಅಂತರವನ್ನು ಸರ್ವೆ ಇಲಾಖೆಯಿಂದ ನೀಡಿರುವ ನಿರ್ಭಂದಿತ ಅಂತರದಲ್ಲಿ ಬರುವ ಗ್ರಾಮಗಳ ಪ್ರಮಾಣಿಕೃತ ಪಟ್ಟಿಯೊಂದಿಗೆ ದೃಢಪಡಿಸಿಕೊಳ್ಳತ್ತಕ್ಕದ್ದು.

d) ನಮೂನೆ-50, 53 ಮತ್ತು 57ರಲ್ಲಿ ಸಕ್ರಮಾತಿ ಕೋರಿರುವ ಜಮೀನಿನ ಪಹಣಿಯ ಕಾಲಂ 3 ಮತ್ತು 9ಕ್ಕೆ ಆಕಾರಬಂದ್‌ನಂತೆ ವಿಸ್ತೀರ್ಣವನ್ನು ತಾಳೆ ಮಾಡಿದ ನಂತರ ಹಾಗೂ ಅಂತಹ ಸರ್ವೆ ನಂಬರ್‌ನಲ್ಲಿ ಈಗಾಗಲೇ ಗುತ್ತಿಗೆ / ಮಂಜೂರಾತಿ ನೀಡಿರುವ ವಿಸ್ತೀರ್ಣಕ್ಕೆ 1 ರಿಂದ 5 ರವರೆಗಿನ ನಮೂನೆಗಳನ್ನು ಸುತ್ತೋಲೆ ಸಂಖ್ಯೆ: ತಾಂ:ಆಡಳಿತ:ಸುತ್ತೋಲೆ:29/2009-10, ದಿನಾಂಕ: 25.01.2010ರನ್ವಯ ಸಿದ್ದಪಡಿಸಿದ ನಂತರ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಜಮೀನು ಲಭ್ಯವಿದ್ದಲ್ಲಿ ಮಾತ್ರ ನಮೂನೆ 50, 53 ಹಾಗೂ 57ರ ಅರ್ಜಿಗಳನ್ನು ನಿಯಮಾನುಸಾರ ಸಮಿತಿಯ ಮುಂದೆ ಮಂಡಿಸಲು ಕ್ರಮವಹಿಸತಕ್ಕದ್ದು. ಒಂದು ವೇಳೆ ಜಮೀನು ಲಭ್ಯವಿಲ್ಲದಿದ್ದಲ್ಲಿ ಜಿಲ್ಲಾಧಿಕಾರಿಗಳು ಅರ್ಜಿಯನ್ನು ತಿರಸ್ಕರಿಸತಕ್ಕದ್ದು,

e) ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಜಮೀನನ್ನು ಸಕ್ರಮಗೊಳಿಸಿ ನಕ್ಷೆ ತಯಾರಿಸುವಾಗ ರಸ್ತೆ ಸಂಪರ್ಕ ಇಲ್ಲದ ಪಕ್ಷದಲ್ಲಿ ಕಡ್ಡಾಯವಾಗಿ ಬಂಡಿದಾರಿ ರಸ್ತೆಗಾಗಿ The Karnataka Revenue Survey Manual ರನ್ವಯ 20

ಅಡಿ ಅಗಲದ ಜಮೀನನ್ನು ಅಥವಾ ರೂಢಿ ದಾರಿ ಇದ್ದಲ್ಲಿ ಇವರೆಡರಲ್ಲಿ ಯಾವುದರ ವಿಸ್ತೀರ್ಣವು ಹೆಚ್ಚೋ ಅಷ್ಟು ವಿಸ್ತೀರ್ಣವನ್ನು ರಸ್ತೆಗಾಗಿ ಗುರುತಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 71ರಡಿ ನಿಯಮಾನುಸಾರ ಜಿಲ್ಲಾಧಿಕಾರಿಗಳು ಕಾಯ್ದಿರಿಸತಕ್ಕದ್ದು.

f) ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ. 23 ಎಲ್.ಜಿ.ಪಿ. 2016, ದಿನಾಂಕ: 05.12.2016ರಲ್ಲಿ ತಿಳಿಸಿರುವಂತೆ ಯಾವ ಯಾವ ಸರ್ವೆ ನಂಬರ್‌ಗಳಲ್ಲಿ ಕಂದಾಯ ಇಲಾಖೆ ಜಮೀನು ಮತ್ತು ಅರಣ್ಯ ಇಲಾಖೆಗೆ ಸಂಬಂಧಿಸಿ ಜಮೀನುಗಳಿರುತ್ತವೆಯೋ ಅಂತಹ ಜಮೀನುಗಳನ್ನು ಮೊದಲು ನಿಯಮಾನುಸಾರ ಪಕ್ಕಾ ಪೋಡಿ ಮಾಡಿ ಪ್ರತ್ಯೇಕಿಸಿ ಅವುಗಳಿಗೆ ಸರ್ವೆ ನಂಬರ್‌ಗಳನ್ನು ನೀಡುವುದು. ಕಂದಾಯ ಇಲಾಖೆಯ ಜಮೀನುಗಳಾಗಿದ್ದಲ್ಲಿ ಸಾಗುವಳಿ ಮಾಡುತ್ತಿರುವ ಅರ್ಜಿದಾರರ ಅರ್ಹ ಅರ್ಜಿಗಳನ್ನು ನಿಯಮಾನುಸಾರ ಬಗರ್‌ಹುಕುಂ ಸಮಿತಿಯ ಮುಂದೆ ಮಂಡಿಸಲು ಕ್ರಮವಹಿಸತಕ್ಕದ್ದು.

10. ಜಿಲ್ಲಾಧಿಕಾರಿಯು ಅನರ್ಹ ಅರ್ಜಿಯನ್ನು ಒಂದು ತಿಂಗಳೊಳಗಾಗಿ ತಿರಸ್ಕರಿಸತಕ್ಕದ್ದು ಮತ್ತು ಸದರಿ ಅರ್ಜಿಯಲ್ಲಿ ಕೋರಿರುವ ಜಮೀನನ್ನು ಸರ್ಕಾರದ ಸ್ವಾಧೀನಕ್ಕೆ ಪಡೆದುಕೊಳ್ಳಲು ನಿಯಮಾನುಸಾರ ಅಗತ್ಯ ಕ್ರಮವಹಿಸತಕ್ಕದ್ದು;

11. ಬಗರ್ ಹುಕುಂ ಸಮಿತಿ ರಚನೆಯಾದ ನಂತರ ಅಧ್ಯಕ್ಷರು ಹಾಗೂ ಸದಸ್ಯರು ಹಾಗೂ ಸದಸ್ಯ ಕಾರ್ಯದರ್ಶಿಯವರ ಆಧಾರ್ e-KYC ಅನ್ನು ತಂತ್ರಾಂಶದಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು. ಬಯೋಮೆಟ್ರಿಕ್ ಆಧಾರ್ e-KYC ನಂತರವೇ ಸಮಿತಿಯ ಸಭೆ ನಡೆಸತಕ್ಕದ್ದು.

12. ಬಗರ್ ಹುಕುಂ ಸಮಿತಿಯು ರಚನೆಯಾದ ನಂತರ ಸಮಿತಿಗಳು ಕನಿಷ್ಠ ವಾರಕ್ಕೊಂದು ಬಾರಿ ಸಭೆ ಸೇರಿ ಬಾಕಿ ಇರುವ ಅರ್ಜಿಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ಸಮಿತಿಯ ಕಾರ್ಯದರ್ಶಿಯವರು ಕ್ರಮವಹಿಸತಕ್ಕದ್ದು.

13. ಸಮಿತಿಯು ಅರ್ಜಿಗಳನ್ನು ಇತ್ಯರ್ಥಪಡಿಸುವಾಗ ಸಾಗುವಳಿ ಮಾಡಿರುವ ಬಗ್ಗೆ ಬಗರ್ ಹುಕುಂ ತಂತ್ರಾಂಶದಲ್ಲಿ ಲಭ್ಯವಿರುವ Karnataka State Remote Sensing Applications Centre (KSRSAC) ನಿಂದ ಪಡೆದ ಉಪಗ್ರಹ ಆಧಾರಿತ ಚಿತ್ರ (Satellite Image)ಗಳನ್ನು ಪರಿಗಣಿಸತಕ್ಕದ್ದು.

14. ಸಮಿತಿಯು ಕರ್ನಾಟಕ ಭೂ ಕಂದಾಯ ನಿಯಮಗಳು, 1966 ನಿಯಮ 108 (ಎಫ್) ರಡಿ ಮಂಜೂರಾತಿಗೆ ಈ ಕೆಳಕಂಡ ಅರ್ಹತೆಯನ್ನು ಹೊಂದಿರುವ ಬಗ್ಗೆ ಪರಿಶೀಲಿಸತಕ್ಕದ್ದು.

I. ಅನಧಿಕೃತವಾಗಿ ಸಾಗುವಳಿ ಮಾಡುವ ಅವಧಿಗೆ ಅರ್ಜಿದಾರನಿಗೆ ಹದಿನೆಂಟು ವರ್ಷವಾಗಿರಬೇಕು;
II. ಅವನು ಭೂಮಿಯು ಇರುವ ಅಥವಾ ಪಕ್ಕದಲ್ಲಿರುವ ತಾಲ್ಲೂಕಿನಲ್ಲಿ ತಾಲ್ಲೂಕಿನ ಪರಿಮಿತಿಯೊಳಗೆ ಖಾಯಂ ನಿವಾಸಿಯಾಗಿರಬೇಕು;

III. ಅವನು ಖುದ್ದಾಗಿ ಸಾಗುವಳಿ ಮಾಡುವ ಸದ್ಭಾವಿಕ ಕೃಷಿಕ ಮತ್ತು ಕರ್ನಾಟಕ ಭೂ ಸುಧಾರಣಾ ಅಧಿನಿಯಮ, 1961ರ ಉಪಬಂಧಗಳ ಮೇರೆಗೆ ಭೂಮಿಯನ್ನು ಹೊಂದುವುದು ಮತ್ತು ಪಡೆಯುವುದರಿಂದ ನಿಷಿದ್ಧನಾಗತಕ್ಕದ್ದಲ್ಲ;

IV. ನಮೂನೆ-50 ಮತ್ತು 53ರ ಅರ್ಜಿಗಳನ್ನು ಪರಿಗಣಿಸುವಾಗ ಅರ್ಜಿದಾರನು ಹದಿನಾಲ್ಕನೇ ಏಪ್ರಿಲ್ 1990ರ ದಿನಕ್ಕೆ ಕಡೆಯಪಕ್ಷ ಹಿಂದಿನ ಮೂರು ವರ್ಷಗಳು ಕಡಿಮೆಯಿಲ್ಲದ ಅವಧಿಯ ನಿರಂತರ ಭೂಮಿಯ ಅನಧಿಕೃತ ಅಧಿಭೋಗನಾಗಿರಬೇಕು;

V. ನಮೂನೆ 57ರ ಅರ್ಜಿಗಳನ್ನು ಪರಿಗಣಿಸುವಾಗ 2005ರ ಜನವರಿ ಮೊದಲ ದಿನಕ್ಕೆ ಮೂರು ವರ್ಷಕ್ಕಿಂತ ಕಡಿಮೆ ಇಲ್ಲದ ಅವಧಿಯವರೆಗೆ ನಿರಂತರವಾಗಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರಬೇಕು;

VI. ಅನುಸೂಚಿತ ಜಾತಿ ಮತ್ತು ಪಂಗಡಗಳಿಗೆ ಸೇರಿದ ವ್ಯಕ್ತಿಗಳ ಸಂದರ್ಭದಲ್ಲಿ ಅಂತಹ ಅವಧಿಯು ಒಂದು ವರ್ಷಕ್ಕಿಂತ ಕಡಿಮೆ ಇರತಕ್ಕದ್ದಲ್ಲ.

15. ಬಗರ್ ಹುಕುಂ ಸಕ್ರಮೀಕರಣ ಸಮಿತಿಯು ಅರ್ಜಿದಾರರು ಈಗಾಗಲೇ ಹೊಂದಿರುವ ಭೂಮಿಯ ಜೊತೆಗೆ ಹಾಗೇ ಮಂಜೂರಾದ ಭೂಮಿಯು, 'ಡಿ' ದರ್ಜೆ ಭೂಮಿ ಅಥವಾ ಅದಕ್ಕೆ ಸಮನಾದ ಭೂಮಿಯು ಎರಡು ಹೆಕ್ಟೇರ್ ಮೀರದಂತೆ ಸಕ್ರಮಗೊಳಿಸಲು ನಿಯಮಾನುಸಾರ ಕ್ರಮವಹಿಸತಕ್ಕದ್ದು.

16. ಸಮಿತಿಯು ಅಥವಾ ಹೆಚ್ಚುವರಿ ಸಮಿತಿಯು ಪ್ರಸ್ತಾವನೆಯನ್ನು ಪರಿಶೀಲಿಸಿ ವಿಚಾರಣೆಗೊಳಪಡಿಸಿದ ನಂತರ ಹಕ್ಕನ್ನು ಹೊಂದಿರುವ ಅರ್ಜಿದಾರರಿಗೆ ಅರ್ಹವಾದ ಭೂಮಿಯನ್ನು ಮಂಜೂರು ಮಾಡಲು ಅವಶ್ಯಕವೆಂದು ಪರಿಗಣಿಸಿದ್ದಲ್ಲಿ, ಭೂಮಿಯ ವಿಸ್ತೀರ್ಣವನ್ನು ಮತ್ತು ಭೂಮಿಯ ಮಂಜೂರಾತಿಗೆ ಅವನಿಂದ ಸಂದಾಯವಾಗಬೇಕಾದ ಮೊಬಲಗನ್ನು ನಿರ್ಧರಿಸತಕ್ಕದ್ದು ಹಾಗೂ ಉದ್ದೇಶಿತ ಮಂಜೂರಾತಿಗಾಗಿ ಹಿತಾಸಕ್ತಿಯುಳ್ಳ ವ್ಯಕ್ತಿಗಳಿಂದ 15 ದಿನಗಳೊಳಗೆ ಆಕ್ಷೇಪಣೆಗಳನ್ನು ಆಹ್ವಾನಿಸಲು ಗ್ರಾಮದ ಚಾವಡಿಯಲ್ಲಿ ಮತ್ತು ಗ್ರಾಮ ಪಂಚಾಯಿತಿಯ ಕಛೇರಿಯಲ್ಲಿ ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ನಿಯಮಾನುಸಾರ ನೋಟೀಸ್‌ನ್ನು ಪ್ರಕಟಿಸತಕ್ಕದ್ದು.

17. ನೋಟೀಸ್‌ನಲ್ಲಿ ನಿರ್ದಿಷ್ಟಪಡಿಸಿದ ಅವಧಿ ಮುಗಿದ ನಂತರ ಸಮಿತಿಯು ಅಥವಾ ಹೆಚ್ಚುವರಿ ಸಮಿತಿಯು ಸ್ವೀಕರಿಸಿದ ಆಕ್ಷೇಪಣೆಗಳನ್ನು ಪರ್ಯಾಲೋಚಿಸಿದ ನಂತರ ಅವಶ್ಯಕತೆ ಇದ್ದರೆ ಹೆಚ್ಚಿನ ವಿಚಾರಣೆ ಮಾಡಿದ ನಂತರ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಭೂಮಿಗೆ ಅಗತ್ಯವಾದ ಶಿಫಾರಸ್ಸು ಮಾಡುವುದು ಅಥವಾ ಅದನ್ನು ವಜಾಗೊಳಿಸತಕ್ಕದ್ದು. ಸಮಿತಿಯ ತೀರ್ಮಾನವನ್ನು ಬಗರ್ ಹುಕುಂ ತಂತ್ರಾಂಶದಲ್ಲಿ ಅಧ್ಯಕ್ಷರ ಹಾಗೂ ಎಲ್ಲಾ ಸದಸ್ಯರುಗಳ Aadhaar Based e-sign ಪಡೆಯುವುದರ ಮೂಲಕ ನಮೂದಿಸತಕ್ಕದ್ದು.

18. ಸಮಿತಿಯ ತೀರ್ಮಾನದಂತೆ ಏಕ ಕಾಲದಲ್ಲಿ ಸದಸ್ಯ ಕಾರ್ಯದರ್ಶಿಗಳಾದ ತಹಶೀಲ್ದಾರರು ನಿಗಧಿತ ಮೊಬಲಗನ್ನು ಸಂದಾಯ ಮಾಡಲು ಅರ್ಹ

ಅರ್ಜಿದಾರರಿಗೆ ತಿಳಿಸತಕ್ಕದ್ದು ಹಾಗೂ ನಮೂನೆ-1 ರಿಂದ ನಮೂನೆ-5, ನಕ್ಷೆ ಮತ್ತು ಅಧಿಕೃತ ಜ್ಞಾಪನದೊಂದಿಗೆ ಪೋಡಿಗಾಗಿ ಹೊಸ ನಂಬರ್ ಸೃಜಿಸಲು ತಂತ್ರಾಂಶದ ಮೂಲಕ ಮಾಹಿತಿಯನ್ನು ಸರ್ವೆ ಇಲಾಖೆಗೆ ಸಲ್ಲಿಸತಕ್ಕದ್ದು.

19. ಸರ್ವೆ ಇಲಾಖೆಯವರು ಒಂದು ಸರ್ವೆ ನಂಬರಿನಲ್ಲಿ ಈ ಹಿಂದೆ ಮಂಜೂರಾಗಿ ಪೋಡಿಯಾಗದೇ ಬಾಕಿ ಉಳಿದಿರುವ ಎಲ್ಲಾ ದರಖಾಸ್ತ್ ಮಂಜೂರಾತಿ ಜಮೀನುಗಳನ್ನು ಹಾಗೂ ಕಂಡಿಕೆ-18ರಲ್ಲಿ ತಿಳಿಸಿರುವಂತೆ ಅನಧಿಕೃತ ಸಾಗುವಳಿ ಸಕ್ರಮಕ್ಕೆ ಸಲ್ಲಿಸಲಾಗಿರುವ ಎಲ್ಲಾ ಪೋಡಿ ಪ್ರಕರಣಗಳನ್ನು ಏಕ ಕಾಲದಲ್ಲಿ ಪೋಡಿ ಮಾಡತಕ್ಕದ್ದು.

20. ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94ಎ, ಕಲಂ 94ಬಿ ಹಾಗೂ ಕಲಂ 94ಎ(4) ಪ್ರಕರಣಗಳ ಮೇರೆಗೆ ಮಂಜೂರಾಗಿರುವ ಭೂ ಮಂಜೂರಾತಿಗೆ ಅನುಸಾರವಾಗಿ ಕರ್ನಾಟಕ ಭೂ ಕಂದಾಯ ನಿಯಮಗಳು, 1966 ನಿಯಮ 108-ಜಿ ರಡಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಮೊಬಲಗನ್ನು ಸಂದಾಯ ಮಾಡಲು ವಿನಾಯಿತಿ ನೀಡಲಾಗಿದೆ. ಉಳಿದ ಪ್ರಕರಣಗಳಲ್ಲಿ ಮೊದಲನೇ ಕಂತನ್ನು ಸಂದಾಯ ಮಾಡತಕ್ಕದ್ದು. ಮೊದಲನೇ ಕಂತಿನ ಸಂದಾಯಕ್ಕಾಗಿ ನಿಗದಿಯಾದ ಮುಕ್ತಾಯವಾಗುವ ಕೊನೆಯ ದಿನಾಂಕದಿಂದ 60 ದಿವಸಗಳೊಳಗೆ ಬಾಕಿ ಮೊಬಲಗನ್ನು ಎರಡು ಕಂತುಗಳಲ್ಲಿ ಸಂದಾಯ ಮಾಡತಕ್ಕದ್ದು. e-challan ಮೂಲಕ ಸಂದಾಯ ಮಾಡಿದ ಮೊಬಲಗಿನ ರಶೀದಿಯನ್ನು ಕಡ್ಡಾಯವಾಗಿ ತಂತ್ರಾಂಶದಲ್ಲಿ upload ಮಾಡತಕ್ಕದ್ದು.

21. ಸರ್ವೆ ಇಲಾಖೆಯವರು ಜಮೀನಿಗೆ ಸಂಬಂಧಿಸಿದಂತೆ ಎಲ್ಲಾ ಪೋಡಿ / ದುರಸ್ತಿ ಪ್ರಕ್ರಿಯೆಯನ್ನು ಒಂದು ವಾರದೊಳಗೆ ಪೂರ್ಣಗೊಳಿಸಿ ಹೊಸ ಸರ್ವೆ ನಂಬರ್ ರೊಂದಿಗೆ ಕಡತವನ್ನು ತಹಶೀಲ್ದಾರವರ ಕಛೇರಿಗೆ ಹಿಂದಿರುಗಿಸತಕ್ಕದ್ದು. ತಹಶೀಲ್ದಾರವರು ಕಡತ ಸ್ವೀಕರಿಸಿದ ಏಳು ದಿನಗಳೊಳಗಾಗಿ ದುರಸ್ತಿಪಡಿಸಿದ ಜಮೀನಿಗೆ ಸಂದಾಯವಾಗಬೇಕಾಗಿರುವ ಮೊಬಲಗನ್ನು ಪಾವತಿಸಿರುವ ಬಗ್ಗೆ ಪರಿಶೀಲಿಸಿಕೊಂಡು ಹೊಸ ಸರ್ವೆ ನಂಬರ್ ಅನ್ನು ಅಳವಡಿಸಿ Bar Coded e-ಸಾಗುವಳಿ ಚೀಟಿಯನ್ನು ನೀಡತಕ್ಕದ್ದು. ತಹಶೀಲ್ದಾರರು Bar Coded e-ಸಾಗುವಳಿ ಚೀಟಿಯಂತೆ ಸದರಿ ಜಮೀನನ್ನು ಒಂದು ವಾರದೊಳಗಾಗಿ ಉಪ ನೋಂದಣಾಧಿಕಾರಿ ಕಛೇರಿಯಲ್ಲಿ ನೋಂದಣಿ ಮಾಡಿಕೊಡತಕ್ಕದ್ದು.

22. ನೋಂದಣಿಯಾದ ದಾಖಲೆಯ ಮೇರೆಗೆ ಒಂದು ವಾರದೊಳಗಾಗಿ ಸರ್ವೆ ದಾಖಲೆಗಳಲ್ಲಿ ಮಾಲೀಕತ್ವದ ಬಗ್ಗೆ ಹಾಗೂ ಪಹಣಿಯಲ್ಲಿ ಸೂಕ್ತ ಇಂದೀಕರಣಕ್ಕಾಗಿ ಅನುಕ್ರಮವಾಗಿ ಸರ್ವೆ ಇಲಾಖೆ ಹಾಗೂ ಕಂದಾಯ ಇಲಾಖೆಯವರು ಸೂಕ್ತ ಕ್ರಮವಹಿಸತಕ್ಕದ್ದು.

23. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸಕ್ರಮಗೊಳಿಸಿರುವ ಜಮೀನುಗಳನ್ನು ಕಡ್ಡಾಯವಾಗಿ ಪಿ.ಟಿ.ಸಿ.ಎಲ್. ಕಾಯ್ದೆಯಡಿ ಪರಭಾರೆ ನಿಷೇಧ ಜಮೀನು ಎಂದು ಭೂಮಿ ತಂತ್ರಾಂಶದಲ್ಲಿ "ಫ್ಲ್ಯಾಗ್" ಮಾಡತಕ್ಕದ್ದು ಹಾಗೂ ಸಾಮಾನ್ಯ ವರ್ಗದವರಿಗೆ ಸಕ್ರಮಗೊಳಿಸಿರುವ ಜಮೀನುಗಳನ್ನು ಪರಭಾರೆ ನಿಷೇಧ ಅವಧಿಯನ್ನು ಭೂಮಿ ತಂತ್ರಾಂಶದಲ್ಲಿ "ಫ್ಲ್ಯಾಗ್" ಮಾಡತಕ್ಕದ್ದು.

24. ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸುವಾಗ ಸಂದರ್ಭಾನುಸಾರ ಮಂಜೂರಾತಿಯು ಗಂಡ ಮತ್ತು ಹೆಂಡತಿ ಹೆಸರಿನಲ್ಲಿ ಜಂಟಿಯಾಗಿ ಅಥವಾ ಅರ್ಜಿದಾರರ ಹೆಸರಿನಲ್ಲಿ ಇರತಕ್ಕದ್ದು. ಮಂಜೂರಾತಿ ಪಡೆದವನು ಸಾಗುವಳಿ ಚೀಟಿ ಅಥವಾ ಮಂಜೂರಾತಿ ಪ್ರಮಾಣ ಪತ್ರ ನೀಡಿದ ದಿನಾಂಕದಿಂದ 25 ವರ್ಷಗಳ ಅವಧಿಯವರೆಗೆ ಭೂಮಿಯನ್ನು ಪರಭಾರೆ ಮಾಡತಕ್ಕದ್ದಲ್ಲ ಅಥವಾ ಅದನ್ನು ವ್ಯವಸಾಯೇತರ ಉದ್ದೇಶಗಳಿಗೆ ಉಪಯೋಗಿಸತಕ್ಕದ್ದಲ್ಲ.

25. ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108-ಜೆ ರಡಿ ಮಂಜೂರಾತಿ ನಿಯಮಗಳು ಅಥವಾ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಮಂಜೂರಾತಿದಾರನ ಅಹವಾಲನ್ನು ಆಲಿಸಿದ ನಂತರ ನಿಯಮಾನುಸಾರ ಉಪವಿಭಾಗಾಧಿಕಾರಿಗಳು ಸದರಿ ಜಮೀನುಗಳನ್ನು ಸರ್ಕಾರಕ್ಕೆ ಮರುಸ್ವಾಧೀನ ಪಡೆದುಕೊಳ್ಳತಕ್ಕದ್ದು.

26. ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108-ಕೆ ರಡಿ ಭೂಮಿಯ ಯಾವುದೇ ಮಂಜೂರಾತಿಯು ಸುಳ್ಳು ಅಥವಾ ಮೋಸದ ನಿವೇದನೆಯ ನಟನೆಯಿಂದ ಅಥವಾ ನಿಯಮಗಳಿಗೆ ವಿರುದ್ಧವಾಗಿ ಮಂಜೂರಾತಿಯನ್ನು ಪಡೆದಿದ್ದರೆ ಮಂಜೂರಾತಿದಾರನ ಅಹವಾಲನ್ನು ಆಲಿಸಿದ ನಂತರ ಉಪವಿಭಾಗಾಧಿಕಾರಿಗಳು ನಿಯಮಾನುಸಾರ ಸದರಿ ಜಮೀನನ್ನು ಸರ್ಕಾರಕ್ಕೆ ಮರುಸ್ವಾಧೀನ ಪಡೆದುಕೊಳ್ಳತಕ್ಕದ್ದು.

ಈ ಮೇಲ್ಕಂಡ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಹಾಗೂ ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಸರ್ಕಾರವು ನೀಡಿರುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಈ ಕಾರ್ಯದಲ್ಲಿ ಯಾವುದೇ ದೂರುಗಳಿಗೆ ಆಸ್ಪದ ನೀಡದಂತೆ ಸಂಪೂರ್ಣ ಪಾರದರ್ಶಕತೆಯನ್ನು ಪಾಲಿಸತಕ್ಕದ್ದು. ಯಾವುದೇ ಅಧಿಕಾರಿಗಳ/ನೌಕರರ ಲೋಪವನ್ನು ಸರ್ಕಾರವು ತೀವ್ರ ಗಂಭೀರವಾಗಿ ಪರಿಗಣಿಸಲಾಗುವುದೆಂದು ಹಾಗೂ ಅವರ ವಿರುದ್ಧ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 35 ಹಾಗೂ ಕಲಂ 192(ಎ)ರಡಿ ಸೂಕ್ತ ಕ್ರಮ ಹಾಗೂ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದೆಂದು ಈ ಮೂಲಕ ತಿಳಿಸಿದೆ.

**(ರಾಜೇಂದರ್ ಕುಮಾರ್ ಕಟಾರಿಯಾ)**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಂದಾಯ ಇಲಾಖೆ.

**ಇವರಿಗೆ,**

1. ಆಯುಕ್ತರು, ಕಂದಾಯ ಆಯುಕ್ತಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
3. ಆಯುಕ್ತರು, ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ.
4. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
5. ಎಲ್ಲಾ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರು.
6. ರಾಜ್ಯದ ಎಲ್ಲಾ ಉಪವಿಭಾಗಾಧಿಕಾರಿಗಳು (ಜಿಲ್ಲಾಧಿಕಾರಿಗಳ ಮುಖಾಂತರ)
7. ರಾಜ್ಯದ ಎಲ್ಲಾ ತಹಶೀಲ್ದಾರರುಗಳು (ಜಿಲ್ಲಾಧಿಕಾರಿಗಳ ಮುಖಾಂತರ)
8. ಹೆಚ್ಚುವರಿ ಪ್ರತಿ/ಶಾಖಾ ರಕ್ಷಾ ಕಡತ.

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.

2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ, ಆಪ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಂದಾಯ ಇಲಾಖೆ (ಭೂ ಮಂಜೂರಾತಿ & ಭೂ ಸುಧಾರಣೆ)
4. ಸರ್ಕಾರದ ಉಪಕಾರ್ಯದರ್ಶಿಯವರ ಆಪ್ತ ಸಹಾಯಕರು ಕಂದಾಯ ಇಲಾಖೆ (ಸಮನ್ವಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಭೂ ಮಂಜೂರಾತಿ-1 ಮತ್ತು ಭೂ ಮಂಜೂರಾತಿ-3 /ಪೀಠಾಧಿಕಾರಿಗಳು, ಭೂ ಮಂಜೂರಾತಿ-2, ಬಹುಮಹಡಿಗಳ ಕಟ್ಟಡ, ಬೆಂಗಳೂರು.

* * * *